ಕರ್ನಾಟಕ ಸರ್ಕಾರ
ಕೃಷಿ ಇಲಾಖೆ
ಕೃಷಿ ಆಯುಕ್ತರ ಕಾರ್ಯಾಲಯ, ನಂ.01, ಶೇಷಾದ್ರಿ ರಸ್ತೆ, ಬೆಂಗಳೂರು-01

ಸಂಖ್ಯೆ:ಜಕೃನಿ(ಯೋ)/ರೈ.ಆ/ಎಲ್.ಎ.ಕ್ಯೂ-1529/2024-25 ದಿನಾಂಕ: 20 - 07-2024

ರವರಿಗೆ,

ಸರ್ಕಾರದ ಕಾರ್ಯದರ್ಶಿಯವರು,
ಕೃಷಿ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ:- ಶ್ರೀ ವಿಠ್ಠಲಗೌಡ ಪಾಟೀಲ್‌
(ಇಂಡಿ) ಮಾನ್ಯ ವಿಧಾನ ಸಭೆಯ ಸದಸ್ಯರು ಇವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:
1529 ಕ್ಕೆ ಉತ್ತರಿಸುವ ಕುರಿತು.
****

ಶ್ರೀ ವಿಠ್ಠಲಗೌಡ ಪಾಟೀಲ್ (ಇಂಡಿ) ಮಾನ್ಯ ವಿಧಾನ ಸಭೆಯ ಸದಸ್ಯರು

ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1529 ಕ್ಕೆ ಕೃಷಿ ಇಲಾಖೆಗೆ

ಸಂಬಂಧಿಸಿದ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ತಮ್ಮ
ವಿಶ್ವಾಸಿ

ಕೃಷಿ ನಿರ್ದೇಶಕರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1529
ಪ್ರಶ್ನೆ ಕೇಳಿರುವ ಸದಸ್ಯರು	ಶ್ರೀ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರ ನೀಡುವ ಸಚಿವರು	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ	24.07.2024

ಕ್ರ ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕೃಷಿ ಹೊಂಡಗಳಲ್ಲಿ ನೀರು ಕುಡಿಯಲು ಮಕ್ಕಳು ಆಟವಾಡಲು ಮತ್ತು ಪ್ರಾಣಿಗಳಿಗೆ ನೀರುಣಿಸಲು ಹೋಗಿ ಕೃಷಿ ಹೊಂಡಗಳಲ್ಲಿ ಅಕಸ್ಮಿಕವಾಗಿ ಕಾಲುಜಾರಿ ಬಿದ್ದು ಹಲವಾರು ಸಾವು-ನೋವು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿ ಕೃಷಿ ಹೊಂಡಗಳಲ್ಲಿ ಆಕಸ್ಮಿಕವಾಗಿ ಬಿದ್ದು ಸಾವು -ನೋವು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ
ಆ)	ಬಂದಿದ್ದರೇ , ಕಳೆದ 3 ವರ್ಷಗಳಲ್ಲಿ ಎಷ್ಟು ಜನ-ಜಾನುವಾರುಗಳು ಮರಣ ಹೊಂದಿರುವುದು ವರದಿಯಾಗಿರುತ್ತವೇ ; ಜಿಲ್ಲಾವಾರು ವಿವರ ನೀಡುವುದು	ಕಳೆದ 3 ವರ್ಷಗಳಲ್ಲಿ ಒಟ್ಟು 45 ಜನ ರೈತರು ಆಕಸ್ಮಿಕವಾಗಿ ಕೃಷಿ ಹೊಂಡಗಳಲ್ಲಿ ಬಿದ್ದು ಮರಣ ಹೊಂದಿದ ಪ್ರಕರಣಗಳು ದಾಖಲಾಗಿರುತ್ತದೆ . (ಜಿಲ್ಲಾವಾರು ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ)
ಇ)	ಈ ಕೃಷಿ ಹೊಂಡಗಳಲ್ಲಿ ಸಾವನ್ನಪ್ಪಿದವರಿಗೆ ಮಾನವೀಯತೆ ದೃಷ್ಠಿಯಿಂದ ಧನ ನೀಡಲು ಅವಕಾಶವಿದೆಯೇ ;	ಕೃಷಿಗೆ ಸಂಬಂಧಿಸಿದ ಇತರೆ ಆಕಸ್ಮಿಕಗಳಿಂದ ಮರಣ ಹೊಂದಿದ ರೈತರು ಮತ್ತು ಕೃಷಿ ಕಾರ್ಮಿಕರ ಪ್ರತಿ ಅರ್ಹ ಕುಟುಂಬಕ್ಕೆ ರೂ .2.00 ಲಕ್ಷ ಪರಿಹಾರ ಧನವನ್ನು ನೀಡಲಾಗುತ್ತಿದೆ .
ಈ)	ಅವಕಾಶವಿದ್ದರೆ ಇದುವರೆವಿಗೂ ಎಷ್ಟು ಪ್ರಕರಣಗಳಲ್ಲಿ ಪರಿಹಾರ ಧನ ವಿತರಿಸಲಾಗಿದೆ ; (ವಿವರ ನೀಡುವುದು)	ಇದುವರೆವಿಗೂ ಒಟ್ಟು 39 ಪ್ರಕರಣಗಳಿಗೆ ಪರಿಹಾರ ಧನ ವಿತರಿಸಲಾಗಿದೆ . ಉಳಿದ 5 ಪ್ರಕರಣಗಳು ಉಪವಿಭಾಗಾಧಿಕಾರಿ ಸಮಿತಿಯಲ್ಲಿ ತಿರಸ್ಕೃತಗೊಂಡಿದ್ದು 1 ಪ್ರಕರಣವು ತೀರ್ಮಾನಕ್ಕೆ ಬಾಕಿ ಇರುತ್ತದೆ . ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ .
ಉ)	ಈ ರೀತಿ ಕೃಷಿ ಹೊಂಡಗಳಲ್ಲಿ ಅವಘಡಗಳು ಸಂಭವಿಸದಂತೆ ಸರ್ಕಾರ ಕೈಗೊಳ್ಳುವ ಮುನ್ನೆಚ್ಚರಿಕೆಯ ಕ್ರಮಗಳೇನು ? (ವಿವರ ನೀಡುವುದು)	ಕೃಷಿ ಹೊಂಡಗಳಲ್ಲಿ ಸಂಭವಿಸಬಹುದಾದ ಅವಘಡಗಳನ್ನು ತಪ್ಪಿಸಲು , 2023-24 ನೇ ಸಾಲಿನಿಂದ ಕೃಷಿ ಭಾಗ್ಯ ಯೋಜನೆಯನ್ನು ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು , ಕೃಷಿ ಹೊಂಡದ ಸುತ್ತಲೂ ತಂತಿಬೇಲಿ ಘಟಕ ಅಳವಡಿಕೆಯು ಕಡ್ಡಾಯವಾಗಿರುತ್ತದೆ . [illegible] ಶೇ 40 ಸಹಾಯಧನವನ್ನು ಸಾಮಾನ್ಯ ವರ್ಗದ ರೈತರಿಗೆ ಮತ್ತು ಶೇ 50 ಸಹಾಯಧನವನ್ನು

		ಪ.ಜಾ/ಪ.ಪಂ ರೈತರಿಗೆ ಪಾವತಿಸಲಾಗುತ್ತಿದೆ . ಹಾಗೆಯೇ ಸುರಕ್ಷಿತ ಕ್ರಮವಾಗಿ ಕೃಷಿ ಹೊಂಡದ ಹತ್ತಿರ ಕಡ್ಡಾಯವಾಗಿ ಸೂಚನಾ ಫಲಕವನ್ನು ಅಳವಡಿಸಿ, ಹೊಂಡಗಳಲ್ಲಿ ಹಗ್ಗಗಳನ್ನು ಇಳಿಬಿಟ್ಟು , ಟ್ಯೂಬ್ ಗಳನ್ನು ತೇಲಿ ಬಿಡಲು ಸೂಚಿಸಲಾಗಿರುತ್ತದೆ . ಫಲಾನುಭವಿ ರೈತರು ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ ಅಳವಡಿಸುವುದಲ್ಲದೇ ಯಾವುದೇ ಅವಘಡಗಳು/ ಪ್ರಾಣ ನಷ್ಟ ಸಂಭವಿಸದಂತೆ ನಿರ್ವಹಣೆ ಮಾಡುವ ಕುರಿತು ಅರಿವು ಮೂಡಿಸಲಾಗಿದೆ . ತಂತಿ ಬೇಲಿ ಅಳವಡಿಕೆ ಮತ್ತು ನಿರ್ವಹಣೆ ಹಾಗೂ ಕೃಷಿ ಹೊಂಡದಲ್ಲಿ ಸಂಭವಿಸುವ ಆಕಸ್ಮಿಕ ಅವಘಡಗಳಿಗೆ ತಾನೇ ನೇರ ಹೊಣೆಗಾರನಾಗಿರುವುದಾಗಿ ಹಾಗೂ ಕೃಷಿ ಇಲಾಖೆಯು ಯಾವುದೇ ರೀತಿಯಿಂದಲೂ ಹೊಣೆಯಾಗಿರುವುದಿಲ್ಲ ಎಂದು ರೈತರಿಂದ ಸ್ವಯಂ ಘೋಷಣೆಯನ್ನೂ ಸಹ ಪಡೆಯಲಾಗುತ್ತಿದೆ.

ಕೃಷಿ ನಿರ್ದೇಶಕರು